# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ

C.C No. 511/2015
CW- 3 PW- 2

ಹೆಸರು ಃ ಗಫೂರ ಮಿಯ್ಯಾ ಮಕಾನದಾರ

ತಂದೆ ಹೆಸರು ಃ ಉಸ್ಮಾನ ಅಲೀ

ವಯಸ್ಸು ಃ 57 ವರ್ಷ

ಉದ್ಯೋಗ ಃ ಒಕ್ಕಲುತನ

ವಾಸ ಸ್ಥಳ ಃ ಬೆಳಗುಂಪಾ, ತಾ: ಚಿತ್ತಾಪೂರ.

---

**ಪ್ರಮಾಣವಚನ ಭೋಧಿಸಲಾಯಿತು. ದಿಃ 08-01-2025**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ**

ನನಗೆ ಚಾಸಾ-2ರವರ ಪರಿಚಯ ಇರುತ್ತದೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

ಸುಮಾರು 8-9 ವರ್ಷಗಳ ಹಿಂದೆ ನಮ್ಮ ಹೊಲದ ಬಳಿ ಎತ್ತುಗಳನ್ನು ಮೇಯಿಸುತ್ತಿರುವಾಗ, ಪೊಲೀಸರು ಎರಡು ದಾಖಲೆಗಳಿಗೆ ನನ್ನ ಸಹಿಗಳನ್ನು ಪಡೆದಿದ್ದರು. ಸಾಕ್ಷಿಯು ಘಟನಾ ಸ್ಥಳದ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-2 ಎಂದು, ಸಹಿಯನ್ನು ಪಿ-2(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಯು ಅಮಾನತ್ತು ಪಂಚನಾಮೆಯಲ್ಲಿರುವ ತನ್ನ ಎರಡೂ ಸಹಿಗಳನ್ನು ನೋಡಿ ಗುರುತಿಸಿದ್ದು, ಅಮಾನತ್ತು ಪಂಚನಾಮೆಯನ್ನು ನಿಶಾನೆ ಪಿ-3 ಎಂದು, ಸಹಿಗಳನ್ನು ಪಿ-3(ಎ) ಮತ್ತು ಪಿ-3(ಬಿ) ಎಂದು ಗುರುತಿಸಲಾಯಿತು.

ಪೊಲೀಸರು ನನ್ನ ಸಮಕ್ಷಮ ಯಾವುದೇ ಘಟನಾ ಸ್ಥಳದ ಪಂಚನಾಮೆ ಕ್ರಮ ಜರುಗಿಸಿರುವುದಿಲ್ಲ ಹಾಗೂ ಯಾವುದೆ ವಾಹನವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ.

(ಮಾನ್ಯ ಸ ಸ ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ದಾಖಲೆಗಳನ್ನು ಪರಿಶೀಲಿಸಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸ.ಸ.ಅಭಿಯೋಜಕರವರಿಂದ**

ದಿನಾಂಕ: 23-09-2015ರಂದು ರಾತ್ರಿ 8-30 ರಿಂದ 9-00 ಗಂಟೆಯವರೆಗೆ ಪೊಲೀಸರು ನನ್ನ ಸಮಕ್ಷಮ ನಿಶಾನೆ ಪಿ-2ರಂತೆ ಪಂಚನಾಮೆ ಕ್ರಮ ಜರುಗಿಸಿ, ನನಗೆ ಘಟನಾ ಸ್ಥಳವನ್ನು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಪೊಲೀಸರು ಅದೇ ದಿನ ಸಾಯಂಕಾಲ 6-30 ರಿಂದ 7-00 ಗಂಟೆಯವರೆಗೆ ನಿಶಾನೆ ಪಿ-3ರಂತೆ ಪಂಚನಾಮೆ ಕ್ರಮ ಜರುಗಿಸಿ, ಒಂದು ನಂಬರ ಇರದ ಟ್ರ್ಯಾಕ್ಟರನ್ನು ಮತ್ತು ಒಂದು ನಂಬರ ಇರದ ಟ್ರಾಲಿಯನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಪೊಲೀಸರು ಸದರಿ ಟ್ರ್ಯಾಕ್ಟರನಲ್ಲಿರುವ ಮರಳನ್ನು ಸಹ ನನ್ನ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ನಿಶಾನೆ ಪಿ-2 ಮತ್ತು ಪಿ-3ರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿರುತ್ತವೆ ಎಂದರೆ ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎಸ್.ಬಿ.ಕೆ. ವಕೀಲರಿಂದ - ಏನು ಇಲ್ಲಾ**

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು, ಚಿತ್ತಾಪೂರ.